ಕರ್ನಾಟಕ ವಿಧಾನ ಸಭೆ

370 ಶ್ರೀ ವಸಂತಬಂಗೇರ(ಬೆಳ್ತಂಗಡಿ)

ಮಾನ್ಯ ಗೃಹ ಸಚಿವರು

ಅ) ಬೆಳ್ತಂಗಡಿ ತಾಲ್ಲೂಕಿನ ಉಜಿರೆ ಗ್ರಾಮದಲ್ಲಿ ದಿನಾಂಕ 14.08.2008 ರಂದು ರಾತ್ರಿ 12.00 ಗಂಟೆಗೆ ಕೆಲವು ಸಂಘಟನೆಯವರು ರಾಷ್ಟ್ರಧ್ವಜವನ್ನು ಹಾರಿಸಿ ಧ್ವಜಕ್ಕೆ ಅವಮಾನ ಮಾಡಿದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ದೇವಿಪ್ರಸಾದ್, ಸಂಪಾದಕರು, ಜೈ ಕನ್ನಡಮ್ಮ ಕೂಸು ವಾರ ಪತ್ರಿಕೆ ಬೆಳ್ತಂಗಡಿ ಇವರು ದಿನಾಂಕ 28.08.2008 ರಂದು ಬೆಳ್ತಂಗಡಿ ತಾಲ್ಲೂಕು ತಹಶೀಲ್ದಾರರಿಗೆ ಮೇಲಿನ ವಿಚಾರದ ಬಗ್ಗೆ ಪತ್ರ ಬರೆದು ದೂರು ಸಲ್ಲಿಸಿರುವುದು ತಿಳಿದುಬಂದಿರುತ್ತದೆ.

ಆ) ರಾಷ್ಟ್ರಧ್ವಜವನ್ನು ರಾತ್ರಿ ವೇಳೆಯಲ್ಲಿ ಅಂದರೆ ಸೂರ್ಯಾಸ್ತಮಾನದ ನಂತರ ಹಾರಿಸಲು ನಮ್ಮ ಸಂವಿಧಾನದಲ್ಲಿ ಅವಕಾಶವಿದೆಯೇ?

ಈ ಬಗ್ಗೆ ಭಾರತದ ಸಂವಿಧಾನದಲ್ಲಿ ಉಲ್ಲೇಖವಿರುವುದಿಲ್ಲ. ರಾಷ್ಟ್ರಧ್ವಜ ಹಾರಿಸುವುದು ಮತ್ತು ಈ ವಿಷಯಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಇಂಡಿಯನ್ ಫ್ಲ್ಯಾಗ್ ಕೋಡ್‌ನಲ್ಲಿ ಮಾರ್ಗದರ್ಶನವಿದೆ. ಫ್ಲ್ಯಾಗ್ ಕೋಡ್‌ನ ಅನುಸಾರ ಸೂರ್ಯಾಸ್ತಮಾನದ ನಂತರ ರಾಷ್ಟ್ರಧ್ವಜವನ್ನು ಹಾರಿಸಲು ಅವಕಾಶ ಮಾಡಿಕೊಟ್ಟಿರುವುದಿಲ್ಲ.

ಇ) ಈ ವಿಚಾರದಲ್ಲಿ ಸಂಘಟನೆಗಳ ವಿರುದ್ಧ ದೂರು ದಾಖಲಾಗಿದ್ದರು ಸಂಬಂಧಪಟ್ಟವರು ಕಾನೂನು ಕ್ರಮ ಕೈಗೊಂಡಿರುತ್ತಾರೆಯೇ?

ಈ ಘಟನೆಗೆ ಸಂಬಂಧಿಸಿದಂತೆ ಬೆಳ್ತಂಗಡಿ ಪೋಲೀಸ್ ಠಾಣೆಯಲ್ಲಿ ಇದುವರೆಗೆ ಸದರಿ ವಿಷಯದ ಬಗ್ಗೆ ಯಾರಿಂದಲೂ ಲಿಖಿತ ದೂರು ದಾಖಲಾಗಿರುವುದಿಲ್ಲ.

ಈ) ಒಂದು ವೇಳೆ ತಪ್ಪಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳದಿದ್ದರೆ ಅದಕ್ಕೆ ಕಾರಣವೇನು?

ಉದ್ಭವಿಸುವುದಿಲ್ಲ.

ಕರ್ನಾಟಕ ವಿಧಾನ ಸಭೆ

372 ಶ್ರೀ ವಸಂತ ಬಂಗೇರ

ಮಾನ್ಯ ಪೌರಾಡಳಿತ ಸಚಿವರು

ಅ) ಬೆಳ್ತಂಗಡಿ ನಗರ ಪಂಚಾಯತ್‌ನಲ್ಲಿರುವ ಮಂಜೂರಾದ ಹುದ್ದೆಗಳೆಷ್ಟು;

ಬೆಳ್ತಂಗಡಿ ಪಟ್ಟಣ ಪಂಚಾಯತಿಗೆ ಒಟ್ಟು 42 ಹುದ್ದೆಗಳು ಮಂಜೂರಾಗಿರುತ್ತದೆ.

ಆ) ಪ್ರಸ್ತುತ ಪಂಚಾಯತ್‌ನಲ್ಲಿರುವ ಸಿಬ್ಬಂದಿಗಳೆಷ್ಟು

ಪ್ರಸ್ತುತ ಒಟ್ಟು 19 ಮಂದಿ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇ) ನಗರ ಪಂಚಾಯತ್‌ನ ಸಿಬ್ಬಂದಿಗಳಿಗೆ ಸರ್ಕಾರದಿಂದ ಮಂಜೂರಾಗುವ ವೇತನದ ಅನುದಾನವೆಷ್ಟು;

2008–09ನೇ ಸಾಲಿಗೆ ರೂ.16.32 ಲಕ್ಷ ವೇತನ ಅನುದಾನ ನಿಗದಿಯಾಗಿದೆ.

ಈ) ವೇತನಕ್ಕೆ ಕೊರತೆಯಾಗುವ ಹಣದ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ.